ರೈತರಿಗೆ ಹಗಲಿನ ವೇಳೆಯಲ್ಲಿ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಬಗ್ಗೆ

೫೬ (೨೦೫) ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ್).—ಮಾನ್ಯ ಅಬಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ರಾಜ್ಯದಲ್ಲಿ ವಿದ್ಯುತ್ ಕೊರತೆಯುಂಟಾಗಿ ಹಗಲು ವೇಳೆಯಲ್ಲಿ ಪಂಪು ಸೆಟ್ಟುಗಳಿಗೆ ವಿದ್ಯುತ್ ನಿಲುಗಡೆ ಮಾಡುವುದರಿಂದ ರೈತರಿಗೆ ತೊಂದರೆ ಆಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಸರ್ಕಾರದವರು ರೈತರ ಸಮಸ್ಯೆಗೆ ಯಾವ ಪರಿಹಾರ ನೀಡುವರು

ಇ) ರೈತರಿಗೆ ಪೂರ್ತಿ ದಿನ ಹಗಲು ವಿದ್ಯುತ್ ಪೂರೈಸಲು ಸರ್ಕಾರದವರು ಏನಾದರೂ ಯೋಚಿಸಿದ್ದಾರೆಯೇ ಹಾಗಿದ್ದಲ್ಲಿ ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಜೆ.ಹೆಚ್. ಪಟೇಲ್ (ಅಬ್ಕಾರಿ ಹಾಗೂ ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಬಂದಿದೆ.

ಆ) ರಾಜ್ಯದಲ್ಲಿ ವಿದ್ಯುಚ್ಛಕ್ತಿಯ ಕೊರತೆ ಇದ್ದರೂ ರೈತರಿಗಾಗುತ್ತಿದ್ದ ತೊಂದರೆಯನ್ನು ಗಮನಿಸಿ ತಾರೀಖು ೯-೧-೧೯೮೪ರಿಂದ ವಾರದಲ್ಲಿ ನಿಲುಗಡೆಯಾಗುತ್ತಿದ್ದ ೩೬ ಗಂಟೆಗಳ ಕಾಲವನ್ನು ೩೦ ಗಂಟೆಗಳಿಗೆ ಇಳಿಸಲಾಗಿದೆ.

ಇ) ಹಾಲಿ ಇರುವ ಪರಿಸ್ಥಿತಿ ಬರುವ ಜೂನ್ ತಿಂಗಳವರೆವಿಗೆ (ಮಳೆಗಾಲ ಆರಂಭವಾಗುವವರೆಗೆ) ಇದೇ ರೀತಿ ಮುಂದುವರೆಯುವುದಿದೆ. ರಾಜ್ಯದಲ್ಲಿ ವಿದ್ಯುತ್ ದೊರಕುವ ಪರಿಸ್ಥಿತಿ ಉತ್ತಮಗೊಂಡರೆ ಮಾತ್ರ ವಿದ್ಯುತ್ ನಿಲುಗಡೆಯನ್ನು ಕಡಿಮೆ ಮಾಡಲು ಪ್ರಯತ್ನಿಸಲಾಗುವುದು.

ಶ್ರೀ ಜ್ಞಾನದೇವ ದೊಡ್ಡಮೇಟಿ.—ವಿದ್ಯುತ್ ನಿಲುಗಡೆ ಮಾಡುವುದನ್ನು ದಿನಕ್ಕೆ ಇಂತಿಷ್ಟು ಕಾಲ ಎಂದು ನಿಗದಿ ಮಾಡಿದ್ದೀರೋ ಆಥವಾ ದಿನ ಬಿಟ್ಟು ದಿನಕ್ಕೆ ಇಷ್ಟು ಸಮಯ ಎಂದು ಮಾಡಿದ್ದೀರೋ ?

ಶ್ರೀ ಜೆ.ಹೆಚ್. ಪಟೇಲ್.—ಒಂದು ದಿನಕ್ಕೆ ಆರು ಗಂಟೆಯಂತೆ ಒಂದು ವಾರದಲ್ಲಿ ಆರು ದಿನಗಳ ಕಾಲ ವಿದ್ಯುತ್ ನಿಲುಗಡೆ ಮಾಡಬೇಕಾಗಿದೆ. ಇದಕ್ಕೆ ಲೋಡ್ ಷೆಡ್ಡಿಂಗ್ ಎಂದು ಕರೆಯುತ್ತಾರೆ. ದಿನಕ್ಕೆ ಆರುಗಂಟೆಯಂತೆ ಆರು ದಿನಕ್ಕೆ ೩೬ ಗಂಟೆಗಳ ಕಾಲ ವಿದ್ಯುತ್ ನಿಲ್ಲಿಸುತ್ತಿದ್ದೆವು. ಅದನ್ನು ಈಗ ದಿನಕ್ಕೆ ೨ ಗಂಟೆ ಕಡಿಮೆ ಮಾಡಿ ೪ ಗಂಟೆಗೆ ಇಳಿಸಿದ್ದೇವೆ. ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಿಂದ ವಿದ್ಯುತ್ ಪಡೆಯಲು ಪ್ರಯತ್ನ ಮಾಡುತ್ತಿದ್ದೇವೆ. ಅವರ ಸಹಾಯ ಸಿಕ್ಕಿದರೆ ಕಡಿತದ ಸಮಯವನ್ನು ಕಡಿಮೆ ಮಾಡುವುದಕ್ಕೆ ತೀರ್ಮಾನ ಮಾಡುತ್ತೇವೆ.

ಶ್ರೀ ಮುತ್ತಿನ ಪೆಂಡಿಮಠ.—ದಿನದಲ್ಲಿ ನಾಲ್ಕು ಗಂಟೆ ವಿದ್ಯುತ್ ಹೋದರೆ ಹೆಚ್ಚು ತೊಂದರೆಯಾಗುವುದಿಲ್ಲ. ಆದರೆ ದಿನಕ್ಕೆ ೬ ಗಂಟೆ ೮ ಗಂಟೆಗಳವರೆಗೆ ಈಗ ವಿದ್ಯುತ್ ಹೋಗುತ್ತಿರುವುದರಿಂದ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಇದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದು ಕೊಳ್ಳುತ್ತೀರಿ ?

ಶ್ರೀ ಜೆ.ಹೆಚ್. ಪಟೇಲ್.—ನಾವು ಪ್ರಕಟ ಮಾಡಿದಂತೆ ಆಗುವ ವಿದ್ಯುತ್ ನಿಲುಗಡೆ ಬೇರೆ. ತಾಂತ್ರಿಕ ಕಾರಣಗಳಿಂದ ಅಂದರೆ ಸ್ಥಳೀಯವಾಗಿ ಏನಾದರೂ ತೊಂದರೆಯಾಗಿ ವಿದ್ಯುತ್ ನಿಲುಗಡೆಯಾಗುವುದು ಬೇರೆ. ಅದಕ್ಕೆ ಅನ್‌ಷೆಡ್ಯುಲ್ಡ್ ಲೋಡ್ ಷೆಡ್ಡಿಂಗ್ ಎಂದು ಹೇಳುತ್ತಾರೆ. ಷೆಡ್ಯೂಲ್ಡ್ ಲೋಡ್ ಷೆಡ್ಡಿಂಗ್ ಅನ್ನು ೬ ಗಂಟೆಯಿಂದ ೪ ಗಂಟೆಗೆ ಇಳಿಸಿದ್ದೇವೆ, ಹೊರರಾಜ್ಯ ದಿಂದ ಸಹಾಯ ಸಿಕ್ಕಿದರೆ ಕಡಿತದ ಸಮಯವನ್ನು ಕಡಿಮೆ ಮಾಡುವುದಕ್ಕೆ ತೀರ್ಮಾನ ಮಾಡುತ್ತೇವೆ. ಜನವರಿ ೧೫ ರಿಂದ ಅನ್‌ಷೆಡ್ಯುಲ್ಡ್ ಲೋಡ್ ಷೆಡ್ಡಿಂಗನ್ನು ಬಹುಮಟ್ಟಿಗೆ ತಹಬಂದಿಗೆ ತರುತ್ತಿದ್ದೇವೆ.

ಶ್ರೀ ಎಫ್.ಎ. ಕೊಪ್ಪದ್.—ನಮ್ಮ ಕಡೆ ಮೂರು ದಿನ ಬೆಳಗ್ಗೆ ಹೊತ್ತು ಕರೆಂಟ್ ಹೋದರೆ ಮೂರು ದಿನ ರಾತ್ರಿ ಹೊತ್ತು ಹೋಗುತ್ತದೆ. ಅದಕ್ಕೆ ಸರಿಯಾದ ಸಮಯ ನಿಗದಿ ಮಾಡಿಲ್ಲ. ಇದರಿಂದ ತೊಂದರೆಯಾಗಿರುವುದರಿಂದ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ವಿದ್ಯುತ್ ಮಂತ್ರಿಗಳಿಗೆ ಮೊದಲು ಕರೆಂಟ್ ಚೆನ್ನಾಗಿ ಹರಿಯುತ್ತಿತ್ತು. ಈಗ ಬಹಳ ಕಡಿಮೆಯಾಗಿಬಿಟ್ಟಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಓಲ್ಟೇಜ್ ಇದ್ದರಲ್ಲವೆ.

ಶ್ರೀ ಜಿ.ಹೆಚ್. ಪಟೇಲ್.—ಮೊದಲು ಅವರ ಪ್ರಶ್ನೆಗೆ ಉತ್ತರ ಕೊಟ್ಟು ನಂತರ ಓಲ್ಟೇಜ ವಿಷಯಕ್ಕೆ ಬರುತ್ತೇನೆ. ಕಳೆದ ಎರಡು ಮೂರು ವರ್ಷದಿಂದ ವಿದ್ಯುತ್ ಬೇಡಿಕೆಯ ಪ್ರಮಾಣ ಶೇಕಡ ೧೦ ರಿಂದ ೧೨ ಭಾಗದಷ್ಟು ಹೆಚ್ಚಾಗುತ್ತಾ ಬಂದಿದೆ. ಆದರೆ ವಿದ್ಯುತ್ ಉತ್ಪಾದನೆ ಹೆಚ್ಚಾಗಿಲ್ಲ. ಇರುವ ವಿದ್ಯುತ್ತನ್ನೇ ಹಂಚಬೇಕಾದರೆ ಸ್ವಲ್ಪ ಕಷ್ಟವಾಗುತ್ತಿದೆ. ಮೊದಲು ಲೋಡ್ ಷೆಡ್ಡಿಂಗ್ ಅಂದರೆ ಏನು ಎಂಬುದನ್ನು ಹೇಳುತ್ತೇನೆ. ನಿಮ್ಮ ಮನೆಯಲ್ಲಿ ೬ ಎಲೆಕ್ಟ್ರಿಕ್ ಗೀಸರ್ ಇದೆ ಎಂದು ಇಟ್ಟುಕೊಳ್ಳಿ. ಒಂದು ಗೀಸರ್‌ಗೆ ಒಂದು ಕಿಲೋವ್ಯಾಟ್ ಪವರ್ ಬೇಕು. ೬ ಕಿಲೋವ್ಯಾಟ್ ಪವರ್ ನಿಮಗೆ ಕೊಟ್ಟರೆ ಆರು ಗಂಟೆಯಲ್ಲಿ ಆದನ್ನು ಉಪಯೋಗಿಸಬೇಕು. ಆದರೆ ೬ ಕಿಲೋವ್ಯಾಟನ್ನೂ ಒಂದೇ ಗಂಟೆಯಲ್ಲಿ ಉಪಯೋಗಿಸುವುದಕ್ಕೆ ಬರುವುದಿಲ್ಲ. ನೀವು ಶ್ರೀ ಹೆಚ್. ಖಿ. ಶ್ರೀಕಂಠಯ್ಯನವರ ಹಿಂದೆ ಮಾಡಿದಂತೆ ನಾವು ಮಾಡುವುದಕ್ಕಾಗುವುದಿಲ್ಲ. ನೀವು ಹೈ ಓಲ್ಟೇಜ್‌ಗೆ ಹೋಗಿ ಏನೇನೋ ಮಾಡಿಬಿಟ್ಟಿರಿ. ಆ ತರಹ ಮಾಡುವುದಕ್ಕಿಂತ ಕಡಿಮೆ ಓಲ್ಟೇಜ್‌ನಲ್ಲಿರುವುದೇ ಒಳ್ಳೆಯದು. ನಿಮ್ಮ ತರಪ ಹೈ ಓಲ್ಟೇಜ್‌ನಲ್ಲಿ ಹೋದರೆ ಬರ್ನ್ ಆಗಿಬಿಡುತ್ತದೆ. ಹಳ್ಳಿಗಾಡಿನಲ್ಲಿರುವ ರೈತರಿಗೆ ರಾತ್ರಿ ವಿದ್ಯುತ್ ಸರಬರಾಜು ಮಾಡಿದರೆ ನೀರು ಹಾಯಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಬೆಳಗ್ಗೆ ೬ ಗಂಟೆಯಿಂದ ೧೨ ಗಂಟೆಯವರೆಗೆ ಏನು ವಿದ್ಯುತ್ ನಿಲ್ಲಿಸುತ್ತಿದ್ದೇವೋ ಅದನ್ನು ೬ ಗಂಟೆಯಿಂದ ೯ ಗಂಟೆಗೆ ಇಳಿಸುವುದಕ್ಕೆ ಜನವರಿ ೧೫ ರಿಂದ ಪ್ರಯತ್ನ ಮಾಡುತಿದ್ದೇವೆ. ಆಂಧ್ರಕ್ಕೆ ನಾಳೆ ಹೋಗುತ್ತಿದ್ದೇನೆ. ಅಲ್ಲೇನಾದರೂ ನೆರವು ಸಿಕ್ಕಿದರೆ ರೈತರಿಗೆ ಆದಷ್ಟೂ ಲೋಡ್ ಷೆಡ್ಡಿಂಗ್ ಇಲ್ಲದೇ ಇರುವ ಹಾಗೆ ಮಾಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ವಿ.ಎಸ್. ಆಚಾರ್ಯ.—ಅಧ್ಯಕ್ಷರೇ, ಇವತ್ತು ಉತ್ಪಾದನೆಯಾಗುತ್ತಿರತಕ್ಕ ವಿದ್ಯುತ್‌ನಲ್ಲಿ ಶೇಕಡಾ ೭೧ ಭಾಗವನ್ನು ಉದ್ಯಮದವರು, ಸುಮಾರು ೬.೮ ಭಾಗವನ್ನು ಗ್ರಾಮಾಂತರ ಭಾಗದ ಪಂಪುಸೆಟ್ಟು ಉಳ್ಳವರು ಉಪಯೋಗ ಮಾಡುತ್ತಿದ್ದು, ಗ್ರಾಮಾಂತರ ಪ್ರದೇಶದಲ್ಲಿ ಲೋಡ್ ಶೆಡ್ಡಿಂಗ್ ಮಾಡಬೇಕಾದ ಪ್ರಮೇಯವಿರಲಿಲ್ಲವೆಂದು ನನ್ನ ಭಾವನೆ. ಆದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿ ಪವರ್ ಕಟ್ ಮಾಡುವುದನ್ನು ನಿಲ್ಲಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಹೆಚ್. ಪಟೇಲ್.—ಮಾನ್ಯ ಸದಸ್ಯರು ಹೇಳುವ ಮಾತು ನಿಜ. ಆದರೆ ಮಾನ್ಯ ಸದಸ್ಯರ ಕಲ್ಪನೆಯೇ ಬೇರೆ ಇದೆ. ಇವತ್ತಿನ ದಿವಸ ನಾವು ಉದ್ಯಮದವರ ಮೇಲೆ ೬೫ ಪರ್ಸೆಂಟ್ ಪವರ್ ಕಟ್ ಮಾಡಿದ್ದೇವೆ. ಲೋಡ್ ಶೆಡ್ಡಿಂಗ್‌ನ್ನು ಕಡಿಮೆ ಮಾಡುವುದಕ್ಕೋಸ್ಕರ ಈ ೬೫ ಪರ್ಸೆಂಟ್ ಪವರ್ ಕಟ್ ಮಾಡಲಾಗುತ್ತಿದೆ. ೧೪೮೦ ಮೆಗಾವಾಟ್ ವಿದ್ಯುತ್ ಡಿಮಾಂಡ್ ಇದ್ದು ಪ್ರತಿವರ್ಷವೂ ೧೦೦ ರಿಂದ ೧೫೦ ಮೆಗಾವಾಟ್ ವಿದ್ಯುತ್‌ಗೆ ಡಿಮಾಂಡ್ ಜಾಸ್ತಿಯಾಗುತ್ತಿದೆ. ಈಗ ನಮ್ಮಲ್ಲಿ ಇರುವ ಎಲ್ಲಾ ಜನರೇಟಿಂಗ್ ಸ್ಟೇಷನ್‌ಗಳನ್ನು ಸ್ವಿಚ್‌ಆನ್ ಮಾಡಿದರೂ ಕೂಡಾ ಏನು ಡಿಮಾಂಡ್ ಇದೆ ಅದನ್ನು ಸರಿದೂಗಿಸಲು ಪವರ್ ಕಟ್ ವಿಧಿಸದೇ ನಡೆಸುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ತಾವು ಅನ್‌ಶೆಡ್ಯೂಲ್ಡ್ ಲೋಡ್ ಶೆಡ್ಡಿಂಗ್ ಬಗೆ ತಾಂತ್ರಿಕ ಕಾರಣಗಳನ್ನು ಹೇಳಿದಿರಿ. ಇವತ್ತಿನ ದಿವಸ ಕರೆಂಟ್ ಲೋಡ್ ಕಡಿಮೆ ಇರುವುದರಿಂದ ಪಂಪ್‌ಗಳಲ್ಲಿ ನೀರನ್ನು ಮೇಲೆತ್ತಲು ಆಗುತ್ತಿಲ್ಲ. ಹಾಗೂ ಹಳ್ಳಿಗಳಲ್ಲಿ ದೀಪಗಳು ಮಿಣಕ್ ಮಿಣಕ್ ಎಂದು ಉರಿಯುತ್ತಿದ್ದು ಅವು ಇವೆಯೋ ಇಲ್ಲವೋ ಎನ್ನುವ ಅನುಮಾನ ಬರುತ್ತಿದೆ. ಇದನ್ನು ಸುಧಾರಿಸಲು ಏನು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಜಿ.ಹೆಚ್. ಪಟೇಲ್.—ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡು ಸುಧಾರಣೆ ಮಾಡುತ್ತಿದ್ದೇವೆ.

ಶ್ರೀ ಭೀಮಣ್ಣ ಖಂಡ್ರೆ.—ಬೀದರ್ ಜಿಲ್ಲೆಯಲ್ಲಿ ದಿನದಲ್ಲಿ ೮ರಿಂದ ೧೨ ಗಂಟೆವರೆಗೆ ಎಲೆಕ್ಟ್ರಿಸಿಟಿ ಕಟ್ ಆಗುತ್ತಿದೆ. ಇದಕ್ಕೆ ಗಲಾಟೆ ಮಾಡಿದ ೫೦೦ ಜನರನ್ನು ಜೈಲಿಗೆ ಹಾಕಿದ್ದಾರೆ. ಈ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಜಿ.ಹೆಚ್. ಪಟೇಲ್.—ಈಗಾಗಲೇ ಬೀದರ್ ಜಿಲ್ಲೆಯಲ್ಲಿ ೬ ಗಂಟೆಯ ಬದಲಾಗಿ ೪ಗಂಟೆಗೆ ಇದನ್ನು ಕಡಿಮೆ ಮಾಡಿದ್ದೇವೆ.

ಶ್ರೀ ಪಿ. ರಾಮಯ್ಯದೇವ್.—ಮಾನ್ಯ ಮಂತ್ರಿಗಳು ವಿದ್ಯುತ್ ಕೇಳಲು ಆಂಧ್ರಕ್ಕೆ ಹೋಗುತ್ತೇನೆಂದರು. ಈಗ ಮಾನ್ಯ ಎನ್.ಟಿ. ರಾಮರಾವ್ ಅವರು ತುಂಗಭದ್ರಾದಿಂದ ಹೆಚ್ಚು ನದೀ ನೀರನ್ನು ಕೇಳುತ್ತಿದ್ದಾರೆ. ಇವೆರಡೂ ವಿಷಯದಲ್ಲಿ ಏನಾದರೂ ಒಪ್ಪಂದ ಮಾಡಿಕೊಂಡು ವಿದ್ಯುತ್ ತರುತ್ತೀರಾ?

ಶ್ರೀ ಜೆ.ಹೆಚ್. ಪಟೇಲ್.—ನಾನು ಅಲ್ಲಿಗೆ ಹೋಗುತ್ತಿರುವುದು ಬರೀ ವಿದ್ಯುತ್‌ನ್ನು ಕೊಳ್ಳುವುದಕ್ಕೆ ಮಾತ್ರ. ನೀರಿನ ವಿಷಯ ನನಗೆ ಸಂಬಂಧಪಟ್ಟದ್ದಲ್ಲ.

ಸಾಗರ ಪಟ್ಟಣದಲ್ಲಿ ನಿವೇಶನ ರಹಿತರಿಗೆ ನಿವೇಶನ ನೀಡುವಲ್ಲಿ ಆಗಿರುವ ವಿಳಂಬ

೫೭ (೨೪೨) ಶ್ರೀ ಎಲ್.ಟಿ. ತಿಮ್ಮಪ್ಪ ಹೆಗಡೆ (ಸಾಗರ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಶಿವಮೊಗ್ಗ ಜಿಲ್ಲೆ ಸಾಗರ ಪುರಸಭಾ ಸರಹದ್ದಿನಲ್ಲಿ ಕಳೆದ ಐದು ವರ್ಷಗಳಿಂದ ಹಂಚಲಾದ ಮನೆ ನಿವೇಶನಗಳ ಸಂಖ್ಯೆ ಎಷ್ಟು ಮತ್ತು ಎಷ್ಟು ಅರ್ಜಿಗಳು ಬಂದಿದ್ದಿತು?

ಆ) ಸಾಕಷ್ಟು ಪ್ರಮಾಣದಲ್ಲಿ ಆಗತ್ಯವಿದ್ದವರಿಗೆ ನಿವೇಶನ ಹಂಚಿಕೆ ಮಾಡುವಲ್ಲಿ ಸರಕಾರದವರ ಮಂಜೂರಾತಿಗಾಗಿ ದಾಖಲೆಗಳು ಓಡಾಡುತ್ತಿರುವ ಕಾರಣ ವಿಳಂಬವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಈ ರೀತಿ ಮಂಜೂರಾತಿಯಲ್ಲಿ ವಿಳಂಬ ಕಾರಣವೇ ಅನಧಿಕೃತ ಕಟ್ಟಡಗಳು ಹೆಚ್ಚಿನ ಸಂಖ್ಯೆಯಲ್ಲಿ ಬರಲು ಕಾರಣ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಅಧಿಕಾರ ವಿಕೇಂದ್ರೀಕರಣವಾಗಿರುವುದರಿಂದ ಮಂಜೂರಾತಿ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡುವಲ್ಲಿ ತೊಂದರೆ ಏನು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ಹಂಚಿಕೆ ಆಗಿಲ್ಲ. ೪೩೧ ಅರ್ಜಿಗಳು ಬಂದಿದ್ದವು.

ಆ) ಬಂದಿದೆ.

ಇ) ಇದೇ ಕಾರಣವಲ್ಲ. ಸುಮಾರು ೩೦ ವರ್ಷಗಳ ಹಿಂದಿನಿಂದಲೂ ಅನಧಿಕೃತ ಕಟ್ಟಡಗಳು ಬಂದಿವೆ.

ಈ) ಈ ದಿಶೆಯಲ್ಲಿ ಕಾಯಿದೆ ಮತ್ತು ನಿಯಮಗಳ ತಿದ್ದುಪಡಿ ಮಾಡಲು ಪರಿಶೀಲಿಸಲಾಗುತ್ತಿದೆ.

ಶ್ರೀ ಎಲ್.ಟಿ. ತಿಮ್ಮಪ್ಪ ಹೆಗ್ಡೆ.—ಅಧ್ಯಕ್ಷರೇ, ಹಂಚಿಕೆಯಲ್ಲಿ ೫ ವರ್ಷಗಳ ವಿಳಂಬವಾಗಿರುವುದು ಇಲಾಖೆಯ ಕಾರ್ಯದಲ್ಲಿನ ಉದಾಸೀನತೆಯನ್ನು ತೋರಿಸುತ್ತದೆ. ಇನ್ನು ಮುಂದಾದರೂ ಎಷ್ಟು ದಿವಸಗಳಲ್ಲಿ ನಿವೇಶನವನ್ನು ಹಂಚಿಕೆ ಮಾಡುವ ವ್ಯವಸ್ಥೆ ಮಾಡುತ್ತೀರಾ? ಹಾಗೂ ಮೂರನೇ ಪ್ರಶ್ನೆಗೆ ಉತ್ತರವಾಗಿ ಅನಧಿಕೃತ ಕಟ್ಟಡಗಳು ಕಾರಣವಲ್ಲವೆಂದು ಹೇಳಿದ್ದೀರಿ. ಆದರೆ ಇದಕ್ಕೆ ಇದೂ ಒಂದು ಕಾರಣ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ. ಚಂದ್ರಶೇಖರ್.—೧೯೭೭ರಲ್ಲಿ ಈ ಒಂದು ಕಾರ್ಯಕ್ರಮ ತೆಗೆದುಕೊಳ್ಳಲಾಗಿದ್ದು ಸುಮಾರು ೩೫೧ ಸೈಟ್‌ಗಳನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಂಡು ಆಗ ನಿವೇಶನಗಳನ್ನು ಹಂಚಿಕೆ ಮಾಡುವ ಪಟ್ಟಿಯನ್ನು ಸರ್ಕಾರದ ಆದೇಶದ ಪ್ರಕಾರ ಮಾಡಿದರು. ೧೪೫ ಜನರಿಗೆ ಹಂಚಿಕೆ ರೂಪದಲ್ಲಿ ಮತ್ತು ೭೧ ಸೈಟ್‌ಗಳನ್ನು ಆಕ್ಷನ್ ಮೂಲಕ ಕೊಡಬೇಕೆಂದು ಕಾರ್ಯಕ್ರಮ ತೆಗೆದುಕೊಂಡರು. ಆದರೆ ಇದುವರೆವಿಗೂ ಅದನ್ನು ಜಾರಿಗೆ ಕೊಟ್ಟಿಲ್ಲ. ಈ ಬಗ್ಗೆ ಅವರ ಜೊತೆ ಚರ್ಚೆ ಮಾಡಿದ್ದೇವೆ. ಈ ಬಗ್ಗೆ ಜಿಲ್ಲಾಧಿಕಾರಿಗಳ ಹತ್ತಿರ ಮಾಹಿತಿ ತರಿಸಿಕೊಂಡು ಆದಷ್ಟು ಬೇಗ ಅವುಗಳನ್ನು ಹಂಚುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುವಂತೆ ಮಾಡುತ್ತೇವೆ. ಇನ್ನು ಅಲ್ಲಿ ಸುಮಾರು ೫೮೫ ಕಟ್ಟಡಗಳು ಅನಧಿಕೃತವಾಗಿ ಬಂದಿರುವುದು ನಮ್ಮ ಗಮನಕ್ಕೆ ಬಂದಿದೆ. ಅವುಗಳಿಗೆ ಹಿಂದೆ ಒಂದು ಬೆಲೆ ನಿಗದಿಯಾಗಿತ್ತು. ಈಗ ಆ ನಿವೇಶನಗಳಿಗೆ ಬೇರೆ ಬೆಲೆ ನಿಗದಿಯಾಗಿದ್ದು ಅದು ಬಹಳ